

ಚೆನ್ನಾಗಿ ಅರ್ಥಮಾಡಿಕೊಳ್ಳಬಲ್ಲರು. ಪುರುಷರು ಸುಲಭವಾಗಿ ಇತರರ ಭಾವನೆಗಳನ್ನು ತಮ್ಮದೇ ಭಾಷೆಯಲ್ಲಿ ವಿವರಿಸಬಲ್ಲರು. ಮಹಿಳೆಯರು ಹಾಗಲ್ಲ.



5 ಸಾಹಿತ್ಯವು ಖಂಡಿತವಾಗಿಯೂ ಸಮಾಜದ ಮೇಲೆ ನೇರ ಪ್ರಭಾವ ಬೀರುತ್ತದೆ. ನಾವು ಸಂಸ್ಕೃತಿಯನ್ನು, ಪದಗಳನ್ನು, ನಮ್ಮ ಇತಿಹಾಸವನ್ನು ಕೂಡ ಸಾಹಿತ್ಯದ ರೂಪದಲ್ಲಿಯೇ ಗ್ರಹಿಸಬಹುದು. ನಮ್ಮ ಋಣಾತ್ಮಕ ಭಾವನೆಗಳನ್ನು ಮತ್ತು ಉತ್ತಮ ಗ್ರಹಿಕೆಯನ್ನು ನಾವು ಇದೇ ಮಾಧ್ಯಮ ಅಥವಾ ವೇದಿಕೆಯಲ್ಲಿ ಇತರರಿಗೆ ಸಂವಹನ ಮಾಡಬಹುದು. ಕಹಿಭಾವವನ್ನು ಮತ್ತು ಮಾನಸಿಕ ನೋವುಗಳನ್ನು ಸಾಹಿತ್ಯವು ಶಮನ ಮಾಡುತ್ತದೆ. ಭಾವನಾತ್ಮಕ ನರಳುವಿಕೆಗೆ ಸಾಂತ್ವನ ಹೇಳುವ ಒಂದು ಥೆರಪಿಯಾಗಿಯೂ ಸಾಹಿತ್ಯವು ಕೆಲಸ ಮಾಡುತ್ತದೆ.



6 ಕ್ಷಮಿಸಿ, ಕನ್ನಡಭಾಷೆ ಅಥವಾ ಸಾಹಿತ್ಯದ ಬಗ್ಗೆ ನನಗೇನೂ ಗೊತ್ತಿಲ್ಲ.

7 ನನಗೆ ಗೊತ್ತಿದ್ದ ಪ್ರಕಾರ ಕಾಶ್ಮೀರಿ ಭಾಷೆಯು ಭಾರತದ ಇತರ ಭಾಷೆಗಳಿಗಿಂತ ಭಿನ್ನವಾಗಿದೆ. ಯಾಕೆಂದರೆ ಅದರ ರಚನೆ ಮತ್ತು ವ್ಯಾಕರಣ ನಿಯಮಗಳು ತೀರಾ ಭಿನ್ನವಾಗಿವೆ.

8 ಕಾಶ್ಮೀರಿ ಭಾಷೆಗೆ ಇಲ್ಲಿ ಬಹಳ ಉತ್ತಮ ಪ್ರೋತ್ಸಾಹದಾಯಕ ವಾತಾವರಣವಿದೆ. ವಿವಿಧ ಸಾಹಿತ್ಯ ಸಂಘಟನೆಗಳು ಭಾಷೆ ಮತ್ತು ಸಾಹಿತ್ಯ ಕ್ಷೇತ್ರದ ಅಭಿವೃದ್ಧಿಗಾಗಿ ತಮ್ಮಿಂದಾದ ಉತ್ತಮ ಸಾಹಿತ್ಯ ಚಟುವಟಿಕೆಗಳನ್ನು ಆಯೋಜಿಸುತ್ತಿರುತ್ತಾರೆ. ಪ್ರಾಥಮಿಕ ಶಾಲೆಯ ತರಗತಿಯಿಂದ ಹಿಡಿದು ವಿಶ್ವವಿದ್ಯಾಲಯದವರೆಗೆ ಕಾಶ್ಮೀರಿಭಾಷೆಯನ್ನು ಕಲಿಯುವ ಅವಕಾಶಗಳು ಲಭ್ಯವಿವೆ. ಈ ಭಾಷೆಯಲ್ಲಿ ಬರೆಯುವ ಪ್ರತಿಯೊಬ್ಬರಿಗೂ ತಾವು ಬರೆದುದನ್ನು ಆದಷ್ಟು ಹೆಚ್ಚು ಜನರು ಓದಲಿ ಎಂಬ ಕನಸಿರುತ್ತದೆ.

●

